Motion of Address of Thanks to His Highness the Maharaja.

ಅಧ್ಯಕ್ಷರು (ಮಾನ್ಯ ಶ್ರೀ ವಿ. ವೆಂಕಟಪ್ಪನವರು). — ಶ್ರೀಮನ್ಮಹಾರಾಜರವರ ಭಾಷಣಕ್ಕಾಗಿ ವಂದನೆಗಳನ್ನರ್ಪಣೆ ಮಾಡತಕ್ಕ ಸೂಚನೆಯನ್ನು ಶ್ರೀ ವೀರಣ್ಣಗೌಡರು ಸೂಚಿಸುತ್ತಾರೆ. ಈ ಸಂಬಂಧದಲ್ಲಿ ಈ ಹೊತ್ತು ಸಾಮಾನ್ಯ ಚರ್ಚೆ ಮತ್ತು ನಾಳೆ ತಿದ್ದುಪಡಿಗಳ ಮೇಲೆ ಚರ್ಚೆ ನಡೆಸಬಹುದು.

ಮಾನ್ಯ ಸದಸ್ಯರಿಗೇ ಗೊತ್ತಿರುವ ಹಾಗೆ ಶ್ರೀಮನ್ಮಹಾರಾಜರವರ ಭಾಷಣದ ಮೇಲೆ, ಬಡ್ಜೆಟ್ಟಿನ ಮೇಲೆ ಅಪ್ರೊಪ್ರಿಯೇಷನ್ ಬಿಲ್ಲಿನಮೇಲೆ, ಮತ್ತು ಖೋತಾ ಸೂಚನೆಗಳ ಮೇಲೆ ಚರ್ಚೆಮಾಡುವುದಕ್ಕೆ ಅವಕಾಶ ವಿರುವುದರಿಂದ ಒಬ್ಬೊಬ್ಬರೂ ಯಾವುದಾದರೂ ಒಂದೊಂದು ಅಂಶದ ಮೇಲೆ ಮಾತ್ರ ಮಾತನಾಡುವುದಾದರೆ ಎಲ್ಲ ವಿಷಯಗಳನ್ನೂ ಚರ್ಚಿಸಲು ಅವಕಾಶ ವಾಗುತ್ತದೆ. ಇದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಂಡು ಚರ್ಚೆ ಮಾಡಿದರೆ ಉತ್ತಮ.

Change of Timing of the Assembly sitting for the next day.

The Hon'ble Sri K. CHENGALARAYA REDDY (Leader of the House).—Before proceeding further Sir, may I suggest that tomorrow the Session of the Assembly may be held in the forenoon commencing at about 8 A. M.? It seems to be the general desire of the Hon'ble Members and I would like to submit the same for the consideration of the Chair.

Mr. SPEAKER (The Hon'ble Sri V. Venkatappa). —There is no objection to have the Session tomorrow at 8 A.M.

Janab MAHMOOD SHARIFF (Bangalore-Muslim).—I would like to suggest Sir, that every day it may be held in the mornings. It is summer now. I submit it would be very convenient and we can apply ourselves to our task with a cool mind.

The Hon'ble Sri K. CHENGALA RAYA REDDY.—We will consider the suggestion.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).— ಮಾನ್ಯ ಅಧ್ಯಕ್ಷರೇ, ನಾನು ಈಗ ಸಭೆಯ ಮುಂದಿಡತಕ್ಕ 'ಶ್ರೀಮನ್ಮಹಾರಾಜರವರಿಗೆ ಸಮರ್ಪಣೆ ಮಾಡತಕ್ಕ ವಂದನಾ ಸೂಚನೆ' ಯು ಈ ರೀತಿಯಾಗಿದೆ.—

"That an Address be presented to His Highness the Maharaja in the following terms:—

'May it please Your Highness,

'We the members of the Mysore Legislative Assembly assembled in this Session, beg leave to thank Your Highness for the Address delivered to the Assembly '."

ಈ ಸೂಚನೆಯನ್ನು ನಾನು ಈ ಸಭೆಯ ಮುಂದಿಡುತ್ತ ಕೆಲವು ಅಂಶಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀಮನ್ಮಹಾರಾಜರವರು ಅರ್ಪಣೆ ಕೊಡಿಸಿರತಕ್ಕ ಭಾಷಣವು ಎಷ್ಟು ಚಿಕ್ಕದಾಗಿದೆಯೋ ಅಷ್ಟು ಅರ್ಥಗರ್ಭಿತವಾಗಿದೆ ಮತ್ತು ಅಷ್ಟು ಸಭೆಯವರ ಆಲೋಚನೆಗೆ ಅರ್ಹವಾಗಿದೆಯೆಂದು ಪ್ರಾರಂಭದಲ್ಲೇ ನಾನು ತಿಳಿಸಬೇಕಾಗಿದೆ. ಸ್ವಾಭಾವಿಕವಾಗಿ ಈ ದಿವಸ, ಈ ಘಳಿಗೆಯಲ್ಲಿ ಎಲ್ಲರ ಮನಸ್ಸಿನಲ್ಲೂ ಯಾವ ವಿಷಯ ಹೆಚ್ಚಿನ ಕಳವಳಕ್ಕವಕಾಶ ಕೊಟ್ಟಿದೆಯೋ ಅದೇ ವಿಷಯಕ್ಕೆ ಶ್ರೀಮನ್ಮಹಾರಾಜರವರೂ ಪ್ರಥಮತಃ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟು ಅದನ್ನು ತಮ್ಮ ಭಾಷಣದಲ್ಲಿ ತೋರಿಸಿದ್ದಾರೆ. ಒಂದು ಕಡೆ ಇಂದಿನ ವಿಶ್ವದ ಪರಿಸ್ಥಿತಿಯನ್ನು ಪರಿಶೀಲಿಸುತ್ತ ಮತ್ತೊಂದು ಕಡೆ ಅದರಿಂದ ನಮ್ಮ ದೇಶದ ಮೇಲೆ ಉಂಟಾಗಿರುವ ಅನರ್ಥ ಪರಂಪರೆಗಳನ್ನು ತಿಳಿಸಿದ್ದಾರೆ. ಹಾಗೆ ಉಂಟಾಗಿರತಕ್ಕ ಅನರ್ಥ ಪರಂಪರೆಗಳಲ್ಲಿ ಮುಖ್ಯವಾದದ್ದು ಆಹಾರಾಭಾವ ಮತ್ತು ಬಟ್ಟೆಯ ಅಭಾವ. ಈ ಎರಡರಿಂದ ದೇಶದ ಜನರಿಗೆ ಉಂಟಾಗಿರತಕ್ಕ ತೊಂದರೆ, ಕಷ್ಟ ಇತ್ಯಾದಿಗಳನ್ನೆಲ್ಲಾ ನಾನೀಗ ಮತ್ತೆ ಹೊಸದಾಗಿ ವಿವರಿಸಿ ಹೇಳಬೇಕಾದುದಿಲ್ಲ. ಶ್ರೀಮನ್ಮಹಾರಾಜರವರೂ ಕೂಡ ತಮ್ಮ ಭಾಷಣದಲ್ಲಿ ಇದನ್ನು ಮುಖ್ಯ ವಿಷಯವಾಗಿಯೇ ಪ್ರಸ್ತಾಪ ಮಾಡಿದ್ದಾರೆ. ಇದನ್ನು ಬಹಳ ಎಚ್ಚರಿಕೆಯಿಂದ ಪರಿಶೀಲಿಸಲು ಸೂಚನೆ ಕೊಟ್ಟಿದ್ದಾರೆ. ಈ ಬಗ್ಗೆ ಜನರು ಸುಮ್ಮನೆ ಹೇಚಾಡುತ್ತ ಕುಳಿತುಕೊಳ್ಳುವುದಕ್ಕೆ ಬದಲಾಗಿ ಇದರ ಪರಿಹಾರ ಪ್ರಯತ್ನದಲ್ಲಿ ಇರತಕ್ಕ ಒಂದೇ ಮಾರ್ಗವೆಂದರೆ ಉತ್ಪನ್ನವನ್ನು ಜಾಸ್ತಿ ಮಾಡತಕ್ಕದ್ದು ಎಂದು ಹೇಳಿದ್ದಾರೆ. ಈ ಮಾತು ಬಹಳ ಗಮನಾರ್ಹವಾದುದು. ಇದನ್ನು ದೇಶದ ಜನತೆ, ಸಭೆ ಮತ್ತು ಸರ್ಕಾರದವರು ಮನಗಾಣಬೇಕು. ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಅರ್ಪಣೆ ಕೊಡಿಸಿರುವ ಪ್ರಕಾರ ಈಗ ದೇಶದ ನಾನಾ ಮೂಲೆಗಳಲ್ಲಿ ಉಂಟಾಗಿರತಕ್ಕನಾನಾ ಅಭಾವಗಳಿಗೆಲ್ಲಾ, ವಿಶ್ವದಲ್ಲಿ ಉಂಟಾಗಿರುವ ಆರ್ಥಿಕ ಮುಗ್ಗಟ್ಟು ಮತ್ತು ನಾವು ನಿತ್ಯವೂ ಕೇಳುತ್ತಿರುವ ಯುದ್ಧಭಯ ಇವೇ ಮುಖ್ಯಕಾರಣಗಳಾಗಿವೆ. ಪ್ರಪಂಚದ ಪ್ರತಿಯೊಂದು ದೇಶದಲ್ಲಿಯೂ ದೊಡ್ಡದು,ಚಿಕ್ಕದು ಎಂಬ ವ್ಯತ್ಯಾಸವೇ ಇಲ್ಲದೆ ಯುದ್ಧ ಸನ್ನಾಹಗಳು ನಡೆಯುತ್ತಿವೆ. ಇದರಿಂದ ಜನಸಾಮಾನ್ಯರ ನಿತ್ಯ ಜೀವನೋಪಾಯಕ್ಕೆ ಅತ್ಯಗತ್ಯವಾದ ವಸ್ತುಗಳಾಗಿರತಕ್ಕ ಅನ್ನ ಮತ್ತು ಬಟ್ಟೆಗಳ ಅಭಾವ ಎದ್ದು ಕಾಣುತ್ತಿದೆ. ಇದಕ್ಕಾಗಿ ನಾವು ಒಂದು ಕ್ರಮಬದ್ಧವಾದ ಯೋಜನೆಯನ್ನು ಹಾಕಿಕೊಂಡು ಅದರ ಪ್ರಕಾರ ಜನ ಸಾಮಾನ್ಯರೂ ಮತ್ತು ಸರ್ಕಾರದವರೂ ಒಟ್ಟಾಗಿ ಕಾರ್ಯೋನ್ಮುಖರಾಗುವಂತೆ ಒಂದು ಅಂಶವನ್ನೇ ಎಚ್ಚರಿಕೆಯ ರೂಪದಲ್ಲಿ ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಇದಕ್ಕೆ ಸಾಧನ ಬಹಳ ಮುಖ್ಯ. ಈ ವಿಚಾರದಲ್ಲಿ ಪ್ರತಿಯೊಬ್ಬರೂ ಅವರವರೇ ಪ್ರಯತ್ನಪಡುವುದಕ್ಕೆ ಬದಲಾಗಿ, ಈ ಬಗ್ಗೆ ಬೇಕಾಗುವ ಪ್ರತಿಯೊಂದು ಸಾಧನಗಳನ್ನೂ ಒದಗಿಸತಕ್ಕದ್ದು ಸರ್ಕಾರದವರ ಕರ್ತವ್ಯ ಮತ್ತು ಅವುಗಳ ಸಹಾಯ ಪಡೆದು ಕೆಲಸದಲ್ಲಿ ಕಾರ್ಯೋನ್ಮುಖರಾಗತಕ್ಕದ್ದು ಜನ ಸಾಮಾನ್ಯರ ಕರ್ತವ್ಯ. ಇದನ್ನು ಅರಿತು ನಾವು ಎಷ್ಟು ಬೇಗ ಒಗ್ಗಟ್ಟಾಗಿ ಕಾರ್ಯೋನ್ಮುಖರಾದರೆ ದೇಶಕ್ಕೆ ಅಷ್ಟೂ ಬೇಗ ಕಲ್ಯಾಣ ಉಂಟಾಗುತ್ತ